

ಬೇಸಿಗೆಯ ಮೊದಲ ದಿನಗಳಲ್ಲಿ ನಮ್ಮ ಊರಿನಲ್ಲಿ ಒಂದು ನಿಗೂಢವಾದ ರೋಗ ಕಾಣಿಸಿಕೊಂಡಿತು. ಅದು ಸಾಂಕ್ರಾಮಿಕವಾಗಿದ್ದುದರಿಂದ ಎಲ್ಲ ಕಡೆಗೂ ಹಬ್ಬುತ್ತಿದೆಯೆಂದು ಸುದ್ದಿಯಾಯಿತು. ಡಾಕ್ಟರುಗಳಿಗೆ ರೋಗದ ಕಾರಣವೂ ಅದರ ನಿವಾರಣೆಯ ದಾರಿಯೂ ತಿಳಿಯಲಿಲ್ಲ. ಅದಕ್ಕೆ ಔಷಧವೂ ಇಲ್ಲವೆಂದು ಅವರಿಗೆ ಚಿಂತೆಯಾಯಿತು. ಆದರೆ ನಮಗೇನಾದರೂ ಆರೋಗ್ಯದಲ್ಲಿ ಏರುಪೇರಾಗಿದ್ದರೆ ನಾವು ಅವರನ್ನೇ ಆಧರಿಸಬೇಕಲ್ಲವೇ? ನಮ್ಮೂರಿನ ಪ್ರಖ್ಯಾತ ಡಾಕ್ಟರು ನಾವೆಲ್ಲರೂ ಮುಖಕ್ಕೆ ಮಾಸ್ಕ್ ಹಾಕಬೇಕಂತಲೂ, ಒಬ್ಬರಿಂದೊಬ್ಬರು ಆರು ಅಡಿಗಳಷ್ಟಾದರೂ ದೂರ ಇರಬೇಕೆಂತಲೂ, ಕೈಕುಲುಕುವುದಾಗಲೀ, ಕೈ ತೊಳೆಯದೇ ಏನನ್ನಾದರೂ ತಿನ್ನುವುದಾಗಲೀ, ಕುಡಿಯುವುದಾಗಲೀ ಮಾಡಬಾರದೆಂತಲೂ ಆರೋಗ್ಯಶಾಸ್ತ್ರದ ಮೊದಲ ಪಾಠವೆಂದು ಎಚ್ಚರಿಕೆ ಹೇಳಿದ್ದು ವೈರಲ್ ಆಯಿತು.

ತಮ್ಮ ಮನೆಯ ಒಳಗೆ ಮತ್ತು ಅಂಗಳದ ಸುತ್ತಮುತ್ತ ಸ್ವಚ್ಛವನ್ನಾಗಿಟ್ಟು ಕಸವನ್ನು ಇನ್ನೊಬ್ಬರ ಮನೆಯ ಮುಂದೆ ಅಥವಾ ರಸ್ತೆಯ ಮೇಲೆ ಬಿಸಾಡುವ ನಾವು ಈ ನಿಗೂಢ ರೋಗಕ್ಕೆ ತಕ್ಷಣ